ಶ್ರೀ ಜಿ.ಟಿ.ದೇವೇಗೌಡ: ಮಾನ್ಯ ಅಧ್ಯಕ್ಷರೆ, ಚಿಟ್‌ಫಂಡ್‌ದು ಕೊಟ್ಟಿದ್ದಾರೆ, ಅದನ್ನು ಮುಗಿಸಿ ಬಿಡಿ.

ಅಧ್ಯಕ್ಷರು: ಹೊರಟ್ಟಿಯವರೆ, ನಿಮ್ಮದು ಬಿಲ್ copies circulate ಆಗಬೇಕು. circulate ಆದ ಮೇಲೆ ಮಾಡೋಣ. ಈಗ ಚಿಟ್‌ಫಂಡ್‌ದು copies circulate ಮಾಡಿದ್ದಾರೆ, ಈಗ ಅದನ್ನು ತೆಗೆದುಕೊಳ್ಳೋಣ.

ಶ್ರೀ ಬಸವರಾಜ್ ಎಸ್.ಹೊರಟ್ಟಿ: ಎರಡನೇ ತಿದ್ದುಪಡಿ ಮಂಡನೆ ಮಾಡಬೇಕಾಗಿರುವುದು ಅಷ್ಟೇ.

ಅಧ್ಯಕ್ಷರು: ಅದನ್ನು ಮಂಡನೆ ಮಾಡಿ ಆಯಿತಲ್ಲ.

ಶ್ರೀ ಬಸವರಾಜ್ ಎಸ್.ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ಶಿಕ್ಷಣ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು.

(ಅನುಬಂಧ–7)

ವಿಧೇಯಕಗಳ ಪರ್ಯಾಲೋಚನೆ

4. ಚಿಟ್‌ಫಂಡುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಜಿ.ಟಿ.ದೇವೇಗೌಡ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, 2007ರ ಚಿಟ್‌ಫಂಡುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಜಿ.ಟಿ.ದೇವೇಗೌಡ: ಈ ಚಿಂಟ್‌ಫಂಡ್ ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ಮೊದಲು ಸರ್ಕಾರಕ್ಕೆ ಮಾತ್ರ appeal ಮಾಡುವುದಕ್ಕೆ ಅಧಿಕಾರವಿತ್ತು. ಅದನ್ನು ಜಂಟಿ ನಿಬಂಧಕರು ಮತ್ತು ಉಪ ನಿಬಂಧಕರುಗಳಿಗೆ ವ್ಯಾಜ್ಯವನ್ನು

ಶೀಘ್ರವಾಗಿ ವಿಲೇವಾರಿ ಮಾಡುವುದಕ್ಕೋಸ್ಕರ ಅವರಿಗೆ ಅಧಿಕಾರ ವಿಕೇಂದ್ರಿಕರಣ ಮಾಡುವುದಕ್ಕೆ ಸಣ್ಣ ತಿದ್ದುಪಡಿಯನ್ನು ತಂದಿದ್ದೇವೆ. ಅದನ್ನು ದಯಮಾಡಿ ಒಪ್ಪಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು ಅದನ್ನು ನೀವು explain ಮಾಡಿ.

ಶ್ರೀ ಜಿ.ಟಿ.ದೇವೇಗೌಡ: ಚಿಟ್‌ಫಂಡ್ ಅಧಿನಿಯಮ 97 ಕೇಂದ್ರ ಸರ್ಕಾರದ ಕಾಯಿದೆಯಾಗಿತ್ತು. ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ಚಿಟ್‌ಫಂಡುಗಳ ಅಧಿನಿಯಮಕ್ಕೆ ತಿದ್ದುಪಡಿ ಮಾಡುವ ಅಧಿಕಾರವು ರಾಜ್ಯ ಸರ್ಕಾರಕ್ಕೆ ಇರುತ್ತದೆ ಎಂದು ಕಾನೂನು ಇಲಾಖೆಯು ಅಭಿಪ್ರಾಯ ಪಟ್ಟಿರುತ್ತದೆ. ಈ ಅಧಿನಿಯಮದ 70ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನ್ನು ಅಥವಾ ನಾಮ ನಿರ್ದೇಸಿತನು ಹೊರಡಿಸಿದ ಯಾವುದೇ ಆದೇಶದಿಂದ, ಈ ಅಧಿನಿಯಮದ 69ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರ್‌ನ ಅಥವಾ ನಾಮನಿರ್ದೇಶಿತನ ಐತೀರ್ಪಿನಿಂದ ಬಾಧಿತರಾದ ಯಾವೊಬ್ಬ ವ್ಯಕ್ತಿಯು, ರಾಜ್ಯ ಸರ್ಕಾರಕ್ಕೆ ಮಾತ್ರ ಅಪೀಲ್ ಸಲ್ಲಿಸಬಹುದಾಗಿದೆ. ಸರ್ಕಾರದ ಮುಂದೆ ಬಹಳಷ್ಟು ಸಂಖ್ಯೆಯಲ್ಲಿ ಅಪೀಲುಗಳು, ಮೇಲ್ಮನವಿಗಳು ದಾಖಲಾಗಿವೆ. ಅಂತಹ ಅಪೀಲುಗಳನ್ನು ವಿಲೇ ಮಾಡುವಲ್ಲಿ ವಿಳಂಬವಾಗುತ್ತಿದೆ. ಇಂತಹ ಅಪೀಲುಗಳ ಸುನಾವಣೆಯ ಅಧಿಕಾರವನ್ನು (hearing power ಅನ್ನು) ಅಧೀನ ಅಧಿಕಾರಿಗಳಿಗೆ ಪ್ರತ್ಯಾಯೋಜಿಸುವುದು ಅವಶ್ಯಕವೆಂದು ಕಂಡು ಬಂದಿದೆ. ಈಗ ಇರುವಂತಹ ಚಿಟ್ ಫಂಡುಗಳ ಅಧಿನಿಯಮ 84ನೇ ಪ್ರಕರಣದಡಿ ಅಪೀಲುಗಳ ಸುನಾವಣೆಯ ಅಧಿಕಾರವನ್ನು ಅಧೀನ ಅಧಿಕಾರಿಗಳಿಗೆ ಪ್ರತ್ಯಾಯೋಜಿಸುವಂತಿಲ್ಲ. ಆದುದರಿಂದ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಷ್ಟರ ಮಟ್ಟಿಗೆ ಚಿಟ್ ಫಂಡುಗಳ ಅಧಿನಿಯಮ 1982ರ ಪ್ರಕರಣ 70ನೇ ಮತ್ತು 84ನೇ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಅದಕ್ಕೆ ಈ ವಿಧೇಯಕವನ್ನು ಮಂಡಿಸಿದ್ದೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ದೇವೇಗೌಡರು ಸ್ವಲ್ಪ ನೋಡಬೇಕು. Section 70 is an appeal provision. "Any party, aggrieved by any order passed by the Registrar or the nominee or the award of the Registrar or the nominee under Section 69,

may, within two months from the date of the order or award, appeal to the State Government." Registrar pass ಮಾಡಿದ award ಮೇಲೆ appeal ಹಾಕುವುದಕ್ಕೆ ಇರುವಂತಹ provision ಅನ್ನು ಯಾರಿಗೆ delegate ಮಾಡುತ್ತೀರಿ? Decision Registrar ದು ಆಗಿ ಹೋಗಿಬಿಟ್ಟಿದೆ. Registrar ಕೊಟ್ಟ ತೀರ್ಮಾನದ ಮೇಲೆ ಅವನು appeal ಯಾರ ಹತ್ತಿರ ಹೋಗಬೇಕು? Section 70 ಪ್ರಕಾರ ಅಧಿಕಾರವನ್ನು ಯಾರಿಗೆ delegate ಮಾಡುತ್ತಿದ್ದೀರಿ? After the decision of the Registrar, are you going to delegate the power to the Deputy Registrar, Joint Registrar, Assistant Registrar? Registrar ಒಂದು autonomous body. ಆತನ ತೀರ್ಮಾನವಾದ ನಂತರ appeal ಬರುವುದಕ್ಕೆ ಸರ್ಕಾರಕ್ಕೆ ಇಟ್ಟುಕೊಂಡಿರುವಂತಹ provision ಅನ್ನು delegate ಮಾಡುತ್ತೇವೆಂದರೆ ಯಾರಿಗೆ ಮಾಡುತ್ತೀರಿ, ಹೇಗೆ ಮಾಡುತ್ತೀರಿ ಎಂದು ನನಗೆ ಅರ್ಥವಾಗುತ್ತಿಲ್ಲ. ತಾವು ಇದನ್ನು ಬಿಡಿಸಿ ಹೇಳಬೇಕು. This is an appeal against the decision of the Registrar. ಹಾಗೆ notification ಮಾಡುವುದು "The State Government may, by notification in the Official Gazette, direct thay may power (other than the power to hear appeals or to make rules) exercisable by it under this Act or the rules made thereunder may be exercised also by any officer of the State Government." ನಿಮಗೆ ಆಗಲೇ ಅಲ್ಲಿ ಇತ್ತಲ್ಲ. Section 84 ಕೆಳಗಡೆ notify ಮಾಡುವುದನ್ನು delegate ಮಾಡಬಹುದಾಗಿತ್ತು. Further ಏಕೆ amendment ಮಾಡುತ್ತೀರಿ ಎಂದು ನಮಗೆ ಗೊತ್ತಾಗಬೇಕು. Section 70 ಕೆಳಗಡೆ ತಾವು ಪುನಃ ಪರಿಶೀಲನೆ ಮಾಡಿಸಿ. Appeal provision ಅನ್ನು ನೀವು ಸರ್ಕಾರಕ್ಕೆ ಇಟ್ಟುಕೊಳ್ಳುವುದು ನಿಮಗೇ ಗೌರವ. ಮಾನ್ಯ ಕೆ.ಹೆಚ್.ಪಾಟೀಲ್ ಅವರು ಇದ್ದಾಗ ನಾವು ನೋಡುತ್ತಿದ್ದೆವು. Regstrar ಏನಾದರೂ decision ಕೊಟ್ಟರೆ ಅವರು chamber ನಲ್ಲಿ ಕುಳಿತುಕೊಂಡು hear ಮಾಡುತ್ತಿದ್ದರು. Co-operative Minister ಎಂದರೆ ನೀವು case hear ಮಾಡಬೇಕು. ಅದು ನಿಮಗೆ ಇರುವ ಗೌರವ, ಅದು ನಿಮಗಿರುವ ಅಥಾರಿಟಿ. ಅದನ್ನು ನೀವು ಯಾರಿಗೆ ಕೊಡುತ್ತಿದ್ದೀರಿ? ನಮ್ಮ

Secretary is the Government, ಅವರು ಮಾಡುತ್ತಾರೆ. ಈ power ಅನ್ನು ಯಾರಿಗೆ delegate ಮಾಡುತ್ತೀರಿ? They cannot delegate this power.

ಅಧ್ಯಕ್ಷರು: ಅವರು Department Secretary ಗೆ ಕೊಟ್ಟಿದ್ದಾರಾ?

ಶ್ರೀ ಜೆ.ಸಿ.ಮಾಧುಸ್ವಾಮಿ: ಅಲ್ಲಿ Registrar ಮತ್ತು Secretaryನೆ ಬರುವುದು.

ಶ್ರೀ ಜಿ.ಟಿ.ದೇವೇಗೌಡ: Joint Registrar ತೀರ್ಮ ಕೊಟ್ಟರೆ Registrar appeal ಹೋಗುತ್ತಾರೆ. ಅಧಿಕಾರವನ್ನು ಕೆಳಗಡೆ ಹಂತದಲ್ಲಿ ವಿಕೇಂದ್ರೀಕರಣ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: Section 70 is clear. Section 70 ಗೆ amendment ತರುತ್ತೇವೆಂದರೆ section 69 ಕೆಳಗಡೆ Registrar ಮಾಡಿರುವ award ಗೆ ವಿರುದ್ಧವಾಗಿ appeal ಹಾಕುವುದಕ್ಕೆ ಇಟ್ಟುಕೊಂಡಿರುವಂತಹ provision Section 70. ಮುಂದಿನದನ್ನು ನಿಮಗೆ ಬಿಟ್ಟು ಬಿಡುತ್ತೇನೆ. ನೀವೇ ನೋಡಿಕೊಳ್ಳಿ. ನಾವು ಇದನ್ನು ವಿರೋಧ ಮಾಡುವುದಕ್ಕೋಸ್ಕರ ವಿರೋಧ ಮಾಡುತ್ತಿಲ್ಲ.

ಅಧ್ಯಕ್ಷರು: ಈಗ Registrar ಗೆ ಆ ಅಧಿಕಾರ ಇದೆ. ಅದನ್ನು ನೀವು ಏಕೆ ಬೇರೆಯವರಿಗೆ delegate ಮಾಡುತ್ತಿದ್ದೀರಿ?

ಶ್ರೀ ಜಿ.ಟಿ.ದೇವೇಗೌಡ: ಕೇಸುಗಳು ಇತ್ಯರ್ಥವಾಗುತ್ತಿಲ್ಲ, ವಿಳಂಬವಾಗುತ್ತಿವೆ. ಕೇಸುಗಳನ್ನು ಶೀಘ್ರ ವಿಲೇವಾರಿ ಮಾಡುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದೇವೆ.

ಶ್ರೀ ಎನ್.ಧರ್ಮಸಿಂಗ್: ಮಾನ್ಯ ಅಧ್ಯಕ್ಷರೆ, ಇದು criminal offence. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ you are a Co-operative Minister. ಇಂತಾದ್ದು ಎಲ್ಲವನ್ನು ಕೂಡ ನೀವೇ hear ಮಾಡಬೇಕು. ನಾನೂ ಕೂಡ Muncipal Administration Minister ಆಗಿದ್ದಾಗ ಬೇರೆ ಕಡೆ ಇದ್ದ ಹಾಗೆ ಇವೆಲ್ಲವುಗಳ case hearing ಅನ್ನು ನಾವು ಮಾಡುತ್ತಿದ್ದೆವು. ನೀವು Under Secretary, Secretryಗೆ, Power delegate ಮಾಡಿದರೆ ಹೇಗೆ ಆಗುತ್ತದೆ? ಈಗ ವಿನಿವಿಂಕ್ ಪ್ರಕರಣದಲ್ಲಿ

ಏನಾಗಿದೆ? ಬೆಂಗಳೂರಿನಲ್ಲಿ ಸಾವಿರಾರು ಕೋಟಿ ರೂಪಾಯಿಗಳ ಪ್ರಕರಣಗಳಾಗಿವೆ. ಅದರಲ್ಲಿ ನೀವು ಇನ್ನೂ ಕೂಡ ಯಾರನ್ನೂ ಹಿಡಿಯತಕ್ಕಂಥ ಕೆಲಸವಾಗುತ್ತಿಲ್ಲ. ಅದಕ್ಕೋಸ್ಕರ ಆ Power delegate ಮಾಡಿದರೆ ಅನ್ಯಾಯವಾಗುತ್ತದೆ. ಸರಿಯಾದ ರೀತಿಯಲ್ಲಿ ಸಾಮಾನ್ಯ ಜನರಿಗೆ ನ್ಯಾಯ ಸಿಗುವುದಿಲ್ಲ. ಚಿಟ್ ಫಂಡ್ ವಿಚಾರದಲ್ಲಿ ಇಡೀ ರಾಷ್ಟ್ರದಲ್ಲಿ ಒಂದು ದೊಡ್ಡ ಅನಾಹುತವಾಗಿದೆ. ಇದು ದೊಡ್ಡ scandle ಇದೆ. ಕರ್ನಾಟಕ ರಾಜ್ಯದಲ್ಲಿ ಕೂಡ ಈ ರೀತಿ ಆಗಿದೆ. ಮಾನ್ಯ ದೇಶಪಾಂಡೆಯವರು ಮಂತ್ರಿಯಾಗಿ ಉತ್ತರ ಕೊಡುವಂತಹ ವಿಚಾರದಲ್ಲಿ ವಿನಿವಿಂಕ್ ವಿಚಾರದಲ್ಲಿ ಸಾಕಷ್ಟು ಅಪರಾ-ತಪರಾ ಆಗಿದೆ. ಸಾರ್ವಜನಿಕರ ಹಣ ಸಾವಿರಾರು ರೂಪಾಯಿಯಷ್ಟು ಪೋಲಾಗಿದೆ. ಇದು ಬಹಳ ಮಹತ್ವವಾದುದು, ನೀವು ಇಷ್ಟು ಹಗುರವಾಗಿ ಯಾರಿಗೆ ಅಧಿಕಾರವನ್ನು ಕೊಡುತ್ತೀರಿ. ಯಾವಾಗ ಕೂಡ ಬಿಲ್ ತರುವಂತಹ ಸಂದರ್ಭದಲ್ಲಿ ಕಾನೂನು ಇಲಾಖೆ ಜೊತೆಯಲ್ಲಿ ಮಾತನಾಡಿ ಅದರ ಆಗು ಹೋಗುಗಳ ಬಗ್ಗೆ, ಇರುವಂತಹ ಪರಿಸ್ಥಿತಿಗಳ ಬಗ್ಗೆ ಸರಿಯಾಗಿ ನೋಡಿ ಬಿಲ್ ತರಬೇಕು. ಇದು ಸಾಮಾನ್ಯವಾಗಿ ಇದೆಯೆಂದು ನೀವು ಕೂಡ ಹೇಳಿಬಿಡುತ್ತೀರಿ. ಅವರು, ಇವರು ಕೂಡ ಹೇಳಿದಾಗ yes, no ಎಂದು ಹೋಗಿಬಿಡುತ್ತದೆ, ಆದುದರಿಂದ ಇದು ಆಗುವುದಿಲ್ಲ.

ಅಧ್ಯಕ್ಷರು: yes, no ಎಂದು ಹೇಳಬೇಕಲ್ಲ ಸಾರ್.

ಶ್ರೀ ಜಿ.ಟಿ.ದೇವೇಗೌಡ: Appealing authority ಉಳಿಸಿಕೊಂಡಿದ್ದೇವೆ. Appeal Joint Registrar ಗೆ ಮಾಡುವಂತಾದ್ದು, Joint Registrar Registrar ಗೆ ಮಾಡುವುದು, Registrar ಸರ್ಕಾರಕ್ಕೆ ಮಾಡುವಂತಾದ್ದನ್ನು ಇಟ್ಟುಕೊಂಡಿದ್ದೇವೆ. ಯಾವುದೋ ಜಿಲ್ಲೆ ಅಥವಾ ತಾಲ್ಲೂಕಿನಿಂದ ರಾಜ್ಯ ಸರ್ಕಾರಕ್ಕೆ ನೇರವಾಗಿ ಬರುವುದನ್ನು ನಿಲ್ಲಿಸಿ, ಕೆಳಗಡೆ ಇರುವವರಿಗೆ ಕೊಟ್ಟು ಅಲ್ಲಿಂದ appeal ಮಾಡುವಂತಾದ್ದು ಎಲ್ಲಾ ಇಲಾಖೆಗಳಲ್ಲಿ ಕೂಡ ಅದೇ ರೀತಿ ಇದೆ. ಅದನ್ನು ನಮ್ಮ ಇಲಾಖೆಯಲ್ಲಿ ಕೂಡ ಮಾಡಿ ಅದನ್ನು ಸರಳೀಕರಣಗೊಳಿಸುತ್ತಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಇವತ್ತು 1982 Central Act ಪ್ರಕಾರ provision ಇರುವಂಥಾದ್ದು, 1982 (Central Act 40 of 1982) ಕಲಂ 70 ಯಲ್ಲಿ "Any party aggrieved by any order passed by the Registrar or the nominee or the award of the Registrar or the nominee under Section 69, may, within two months from the date of the order or award, appeal to the State Government" ಎಂದು provision ಇರುವಂಥಾದ್ದು. ನೀವು ಏನು ಹೇಳುತ್ತೀರೆಂದರೆ, "Statement of objects and reasons – Under Section 70 of the Chit Funds Act, 1982 any party aggrieved by any order passed by the Registrar or the nominee or the award of the Registrar or the nominee under Section 69 of the Act may appeal to the State Government. A number of appeals have been filed before the Government and there is considerable delay in disposal of the said appeals" ಬಹಳ ನಿಧಾನವಾಗುತ್ತಿದೆಯೆಂದು ಹೇಳಿದ್ದೀರಿ. ರಿಜಿಸ್ಟ್ರಾರ್‌ಗೆ 69 ರಲ್ಲಿ ಕೊಟ್ಟಿರುವ ಅಧಿಕಾರವನ್ನು ನೀವು ಕೊಟ್ಟಿರುವ ಒಕ್ಕಣೆ ಪ್ರಕಾರ delegate ಮಾಡುತ್ತಿಲ್ಲ. ಸನ್ಮಾನ್ಯ ಸಚಿವರೆ, ಕೇಳಿ, ಅಪೀಲ್ provision 70 ಅನ್ನು ನೀವು ಹೇಳುತ್ತೀರಿ "It is considered necessary to delegate the said power of hearing appeals to the subordinate officers" appeal ನ್ನು subordinate officers hear ಮಾಡಬೇಕಾ, ನೀವೇ ಹೇಳಿ. "It is considered necessary to delegated the said power of hearing appeals to the subordinate officers. The power to hear appeals cannot be delegate under Section 84 of the Act. Hence, it is considered necessary to amend Section 70 and Section 84 of the Chit Funds Act, 1982 in so far as it is applicable to the State of Karnataka to empower….." ಇಲ್ಲಿ decision ಕೊಡುವವರು ಯಾರು? appeal ಮಾಡುವವರು ಯಾರು? appeal ಕೊಡುವ authority ಯನ್ನೇ ನೀವು delegate ಮಾಡುತ್ತೇವೆಂದಾದರೆ. Primary decision ಕೊಡುವವರು ಯಾರು ಎಂದು ಮೊದಲು ಸಭೆಯ ಮುಂದೆ ಬನ್ನಿ. ಈಗ decision ಆಗುತ್ತಿರುವಂಥಾದ್ದು ರಿಜಿಸ್ಟ್ರಾರ್ ಲೆವಲ್‌ನಲ್ಲಿ

ಆ appeal ನಿಮಗೆ ಇರುವಂಥಾದ್ದನ್ನು ಸೆಕ್ಷನ್ 70 ಹೇಳುತ್ತಿರುವಂಥಾದ್ದು. ಇಲ್ಲಿ decision ಮಾಡುವವರು ಯಾರು? ಅಪೀಲ್ ಕೇಳುವವರು ಯಾರು? ಹಾಗಾದರೆ ನಿಮ್ಮ decision ಅನ್ನು ನಿಮ್ಮ CDO ಗಳು ಮಾಡಬೇಕಾಗುತ್ತದೆ. ನಿಮ್ಮ Co-operative Development Officer ಗಳೇ ಇವತ್ತು ಚಿಟ್‌ಫಂಡ್ ಮೇಲೆ Judiciary, Semi Judiciary authority ಗಳಾಗಿ ಬಿಡುತ್ತಾರೆ. ನೀವು ಇದನ್ನು ಡೆಪ್ಯೂಟಿ ರಿಜಿಸ್ಟ್ರಾರ್‌ಗಳಿಗೆ ತರುತ್ತೇವೆಂದರೆ, ಕೇಸನ್ನು ಅಲ್ಲಿ ಶುರು ಮಾಡಿಸುತ್ತೀರಾ, statutory authority ಯನ್ನು CDO case hear ಮಾಡಬಹುದಾ? Enquiry ಮಾಡಿ, Assistant Registrar ಗೆ report ಮಾಡಬೇಕಾ, ಅವನು case hear ಮಾಡಬೇಕಾ? It is irregular. ಹಾಗೆ ಮಾಡುವುದಕ್ಕೆ ಬರುವ ಹಾಗೆ ಇಲ್ಲ. ನೀವು ಚಿಟ್‌ಫಂಡ್ಸ್‌ನಲ್ಲಿ ಈಗ ಏನು ಇದೆ, ದಯಮಾಡಿ ಅದನ್ನೆ ಇಟ್ಟುಕೊಳ್ಳಿ, ಗಹನವಾದ ವಿಷಯಗಳು ಬಂದರೆ, ನೀವು ನಿಮ್ಮ Co-operative Secretary ಕುಳಿತು ಏನು ನಡೆದಿದೆಯೆಂಬ ಬಗ್ಗೆ appeal ಕೇಳುವಂಥಾ ಸ್ಥಿತಿಯನ್ನಾದರೂ ಇಟ್ಟುಕೊಳ್ಳಿ, ಇಲ್ಲವೆಂದರೆ ಎಲ್ಲಾ delegate ಆಗಿ, ನಿಮಗೆ ಏನೂ ಗೊತ್ತಾಗದಂಥಾ ಸ್ಥಿತಿಯನ್ನು ನೀವು ನಿರ್ಮಾಣ ಮಾಡಿಕೊಳ್ಳುತ್ತೀರಿ ಅಷ್ಟೆ.

ಶ್ರೀ ಕೆ.ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ಯಾವ circumstances ನಲ್ಲಿ ಮಾನ್ಯ ಸಹಕಾರ ಮಂತ್ರಿಗಳು ತಂದರೊ, ನನಗೆ ಗೊತ್ತಾಗುತ್ತಿಲ್ಲ. ಈಗ 69ರ ಅಡಿಯಲ್ಲಿ ರಿಜಿಸ್ಟ್ರಾರ್‌ಗೆ ಇದ್ದಂಥಾ ಪವರ್ ಅನ್ನು ನೀವು junior officers ಗೆ ಒಂದು ಸಾರಿ delegate ಮಾಡುತ್ತಿದ್ದೀರಿ. ಈಗಲೇ ಸಹಕಾರ ವ್ಯವಸ್ಥೆಯ ಬಗ್ಗೆ ಈ ಮೂರು ತಿಂಗಳಲ್ಲೇ ನಿಮಗೆ ಬಹಳಷ್ಟು ಅರ್ಥವಾಗಿದೆ. ನಾನು ಇದರ ಬಗ್ಗೆ ಸುಮಾರು 35–40 ವರ್ಷಗಳ ಕಾಲ ಅದರ ಸಾಧಕ ಬಾಧಕಗಳನ್ನು ನೋಡಿದ್ದೇನೆ. ಗ್ರಾಮ ಸಹಕಾರ ಸಂಘದಿಂದ ಹಿಡಿದು ರಾಷ್ಟ್ರ, ಅಂತರಾಷ್ಟ್ರ ಮಟ್ಟದಲ್ಲಿ ನೋಡಿದ್ದೇನೆ. ಇಲ್ಲಿ ಅಪೀಲಿಂಗ್ ಸರ್ಕಾರಕ್ಕೆ ಇರುವುದರಿಂದ ನಿಮಗೆ ನಷ್ಟ ಏನು? ನೀವು ಸರ್ಕಾರವೇ ವಾರಕ್ಕೆ ಎರಡು ದಿವಸಗಳು ಅಪೀಲುಗಳನ್ನು ವಿಲೇವಾರಿ ಮಾಡಿ. ನೀವು ಸೆಕ್ರಟರಿಗೆ delegation power ಕೊಡಿ. ಅದನ್ನು ಬಿಟ್ಟು ನೀವು ಇದನ್ನು junior officers ಗೆ ಕೊಟ್ಟರೆ, ನಾಳೆ ಅಲ್ಲಿ ಏನು ಆಗುತ್ತದೆಂಬುದನ್ನು ನಾನು ಹೇಳಿಬಿಡಲಾ, ನಾನು ಒಬ್ಬ MLA ಆಗಿದ್ದು ನಾನು ರಿಜಿಸ್ಟ್ರಾರ್‌ಗೆ ನೀವು ಇದನ್ನು

ಮಾಡಿಯೆಂದು ಹೇಳುತ್ತೇವೆ. ಇದು ವಾಸ್ತವಾಂಶ ಇದರಲ್ಲಿ ಮುಚ್ಚು ಮರೆ ಇಲ್ಲ. ಅಲ್ಲಿ ಏನು ಆಗುತ್ತದೆಂದರೆ, ಲೋಕಲ್ MLA ಗಳು ಇರುವವರು, ನೀವು ಇದನ್ನು ಮಾಡಿಯೆಂದು ಹೇಳುತ್ತಾರೆ. ಆಗ Deputy Registrar ಇಲ್ಲಿ MLA ಹೇಳಿದ್ದನ್ನೇ ಬರೆಯಬೇಕಾಗುತ್ತದೆ. ನೀವು ಕನಿಷ್ಟ ಪಕ್ಷ ರಾಜ್ಯ ಮಟ್ಟದ Registrarಗೋ, ಸೆಕ್ರಟರಿಗೋ ಇದು ಬಂದಾಗ, ಇದರ ತೀರ್ಮಾನಗಳನ್ನು ಕನಿಷ್ಠ ಇವರು ಮಾಡುವಂಥಾ ಶಕ್ತಿ ಬರುತ್ತದೆ, ಇಲ್ಲದಿದ್ದರೆ ನೇರವಾಗಿ ರಾಜಕಾರಣವಾಗುತ್ತದೆಯೆ ವಿನಃ ಅದು ಕಾನೂನು ರೀತಿಯಾಗುವುದಿಲ್ಲವೆಂದು ನನ್ನ ಅನಿಸಿಕೆ. ಇದನ್ನು ನೀವು delegation Registrar ಗೆ ಇರಬೇಕು, ಮತ್ತೆ ಸರ್ಕಾರಕ್ಕೂ appealing ಅಧಿಕಾರವಿರಬೇಕು.

ಶ್ರೀ ಜಿ.ಟಿ.ದೇವೇಗೌಡ: ಮಾನ್ಯ ಅಧ್ಯಕ್ಷರೆ, ರೆವಿನ್ಯೂ ಇಲಾಖೆಯಲ್ಲಿ ಮೊದಲನೆಯ ಅಧಿಕಾರ ತಹಶೀಲ್ದಾರರಿಗೆ ಇರುತ್ತದೆ. ಆಮೇಲೆ Assistant Commissioner, ಆಮೇಲೆ ಜಿಲ್ಲಾಧಿಕಾರಿಗಳಿಗೆ ಬರುತ್ತದೆ, ಆಮೇಲೆ ಸರ್ಕಾರಕ್ಕೆ ಬರುತ್ತದೆ. ಆ ರೀತಿ ನಮ್ಮಲ್ಲೂ ಕೂಡ Assistant Registrar, Deputy Registrar, Joint Registrar ಎಂದು ಇದ್ದು, ಇವರು ಇರುವಂಥಾ ಎಲ್ಲಾ ಕೇಸ್‌ಗಳನ್ನು ನಡೆಸುತ್ತಾರೆ. ಅವರೇ ದಾವ ಕೇಸ್‌ಗಳನ್ನು ನಡೆಸುತ್ತಾರೆ. ಈ ಚಿಟ್‌ಫಂಡ್ ಏನು ದೊಡ್ಡದಲ್ಲ, ಇದನ್ನೆಲ್ಲಾ ನಾವೇ ಕುಳಿತುಕೊಂಡು ನೇರವಾಗಿ ನಡೆಸುವಂಥಾದ್ದು ಸರಿಯಲ್ಲ. ಈ ಚಿಟ್‌ಫಂಡ್ ಬಾರಿ ದೊಡ್ಡದೇನಲ್ಲಾ ಆದುದರಿಂದ ಅಪೀಲು ಮಾಡುವಂಥಾ ಅಧಿಕಾರ.....

ಶ್ರೀ ಜೆ.ಸಿ.ಮಾಧುಸ್ವಾಮಿ: Chit Fund is governed by Central Act ಇದನ್ನು ದೊಡ್ಡದಲ್ಲವೆಂದು ಹೇಳಬಾರದು. Section 40 of the Central Act ಕೆಳಗಡೆ ಹಾಕಬೇಕಾಗಿರುವಂಥಾದ್ದು ದೊಡ್ಡದೆ, Non-Banking Financial Institutions ಬಗ್ಗೆ, ಅವರ ಕಾರ್ಯವೈಖರಿ ಬಗ್ಗೆ, ಚಿಟ್‌ಫಂಡ್‌ಗಳ ಬಗ್ಗೆ, ತಾವು ಇನ್ನು ವ್ಯಾಪಕವಾಗಿ ಚರ್ಚೆ ಮಾಡಿ, ಇನ್ನು ಬಹಳ ತೀಕ್ಷ್ಣವಾದ ಕಾನೂನುಗಳನ್ನು ತರಬೇಕಾಗಿದೆ. ಇಲ್ಲಿ ಲೂಟಿ ಹೊಡೆದುಕೊಂಡು ಹೋಗುತ್ತಿದ್ದಾರೆ. ಇದನ್ನು ಯಾರು ನಡೆಸುತ್ತಿದ್ದಾರೋ? ಎಷ್ಟು ಬಡ್ಡಿಯನ್ನು ತೆಗೆದುಕೊಳ್ಳುತ್ತಿದ್ದಾರೊ? ಏನು ಮಾಡುತ್ತಿದ್ದಾರೊ? ಇಡೀ ರಾಜ್ಯದಲ್ಲಿ ಗೊತ್ತಾಗದೇ ಇರುವ ಸ್ಥಿತಿಯಲ್ಲಿರುವಾಗ, ಬಹಳ ಹಗುರವಾಗಿ ಚಿಟ್‌ಫಂಡ್‌ಗಳನ್ನು ಇವರು ಬಿಟ್ಟು ಬಿಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುವುದಾದರೆ, ನಾವು

ಈ ಬಗ್ಗೆ ಹೇಳುವುದನ್ನು ಹೇಳಿದ್ದೇವೆ. ಇನ್ನು ಜನಗಳ ಹಿತ ರಕ್ಷಣೆ ಮಾಡುವಂಥಾದ್ದು, ದಿವಾಳಿ ಮಾಡುವಂಥಾದ್ದು ಸರ್ಕಾರಕ್ಕೆ ಬಿಟ್ಟದ್ದು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಸಹಕಾರ ಮಂತ್ರಿಗಳು ಏನು ಅರಿಕೆ ಮಾಡಿಕೊಂಡಿದ್ದಾರೆ. ಅದಕ್ಕೆ ಪೂರಕವಾಗಿ ಯಾವುದೇ ತಪ್ಪು ಅಭಿಪ್ರಾಯಗಳು ಹೋಗಬಾರದು. ಇಲ್ಲಿರುವಂಥಾ ಉದ್ದೇಶ ಬಹಳ ಸೀಮಿತವಾಗಿರುವಂಥಾ ಉದ್ದೇಶವಾಗಿದೆ. ಯಾವುದೇ ಒಂದು ನಿರ್ಣಯವನ್ನು, ಯಾವುದಾದರೂ ಒಂದು ವಿವಾದವನ್ನು, ನಿರ್ಣಯ ಮಾಡಿದಂಥಾ ಸಂದರ್ಭದಲ್ಲಿ Assistant Registrar ಮಾಡಲಿ, Deputy Registrar ಮಾಡಲಿ, ಯಾರೇ ಮಾಡಿದರೂ ಕೂಡ, ಅದರ ನೇರವಾದ ಮೇಲ್ಮನವಿ ಸರ್ಕಾರಕ್ಕೆ ಬರುತ್ತದೆ. ಸರ್ಕಾರದಲ್ಲಿ ಬೇರೆ ಕಾರ್ಯಗಳ ಜೊತೆಗೆ ವಿಪರೀತವಾದಂಥಾ ಒತ್ತಡಗಳು ಮತ್ತು ಮೇಲ್ಮನವಿಗಳು ಬಹಳ ಇದ್ದುದ್ದರಿಂದ, ಆ ಅಧಿಕಾರವನ್ನು ವಿತರಣೆ ಮಾಡಿ, Registrar ಗೆ ಕೊಡಬೇಕೆನ್ನುವಂಥಾದ್ದು ಒಂದು. ತಾವು ಹೇಳಿದಂತೆ ಅದು ಕೇಂದ್ರದ ಕಾನೂನು ಆಗಿದ್ದರೂ ಕೂಡ, ನಮ್ಮ ಕಾನೂನಿನಲ್ಲಿ 84ನೇ ವಿಧಿವಿಧಾನಗಳಲ್ಲಿ ಈ ಪ್ರಸ್ತಾಪವನ್ನು ಮಾಡಿದ್ದೇವೆ. ಈ 84ರಲ್ಲಿ ಏನು ಹೇಳುತ್ತಾರೆಂದರೆ, ರಾಜ್ಯ ಸರ್ಕಾರ ತನ್ನಲ್ಲಿರುವಂಥಾ ಅಧಿಕಾರವನ್ನು ವಿಕೇಂದ್ರಿಕರಿಸಿ ಕೊಡಬಹುದೆಂದು ಇದೆ. ಅದರ ಉದ್ದೇಶದ ಬಗ್ಗೆ ಪ್ರಸ್ತಾಪ ಮಾಡುವಾಗಲೂ ಕೂಡ ಬಹಳ ಸ್ಪಷ್ಟವಾಗಿ ಈ ಮಾತನ್ನು ಹೇಳಿದ್ದಾರೆ "Under Section 70 of the Chit Funds Act, 1982 (Central Act 40 of 1982) any party aggrieved by any order passed by the Registrar or the nominee or the award of the Registrar or the nominee under Section 69 of the Act may appeal to the State Government. A number of appeals have been filed before the Government and there is considerable delay in disposal of the said appeals.

It is considered necessary to delegate the said power of hearing appeals to the subordinate officers. The power to hear appeals cannot be delegated under Section 84 of the Act. Hence, it is considered necessary to amend section 70 and Section 84 of the Chit Funds Act, 1982 in so far as it is applicable to the State

of Karnataka to empower the State Government to delegate the power to hear appeals to the subordinate officers for expeditious disposal of the appeals." ಬಹಳ ಸೀಮಿತ ಉದ್ದೇಶದಲ್ಲಿ, ಈ ಅಪೀಲುಗಳು ಬಹಳ ವಿಪರೀತವಾಗಿ ಬಂದಿರುವಂಥಾ ಮೇಲ್ಮನವಿಗಳ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ತ್ವರಿತವಾಗಿ ವಿವಾದವನ್ನು ಇತ್ಯರ್ಥ ಮಾಡಿ, ತನ್ನ ತೀರ್ಪನ್ನು ಕೊಡುವುದಕ್ಕೆ ಸಾಧ್ಯವಾಗದೇ ಇರುವ ಕಾರಣಕ್ಕಾಗಿಯೆ, ಈಗಿರುವಂಥಾ ಕಾನೂನಿನ ಅಡಿಯಲ್ಲಿ ಮೇಲ್ಮನವಿಯ ವಿಚಾರವನ್ನು ಕೆಳ ಹಂತದಲ್ಲಿ ವಿತರಣೆ ಮಾಡುವಂಥಾ ಅಧಿಕಾರ ಪ್ರಾಪ್ತವಿಲ್ಲದೆ ಇರುವ ಕಾರಣಕ್ಕಾಗಿ ಇವತ್ತು ಇದರಲ್ಲಿ ಮಾಡಿದ್ದೇವೆ. State Government is empowered to make legislation but it has to be reserved for President's assent. ಇಲ್ಲಿ ಈ ಕಾನೂನು ಏನು ಇದೆ. ಇದು ಕೇಂದ್ರದ ಕಾನೂನು ಚಿಟ್‌ಫಂಡ್‌ನಿಂದ ಆಗಿರುವುದರಿಂದ ನಾವು ಅದರ ತಿದ್ದುಪಡಿಯನ್ನು ತಂದು, ಈ ಮೇಲ್ಮನವಿ ಹಕ್ಕು ಸರ್ಕಾರಕ್ಕೆ ಇರುವಂಥಾದ್ದನ್ನು, ರಿಜಿಸ್ಟ್ರಾರ್‌ಗೆ ಕೊಡುತ್ತೇವೆ. ಈ ರಿಜಿಸ್ಟ್ರಾರ್‌ಗೆ ಕೊಡುವಂಥಾ ಹಕ್ಕಿನ ತಿದ್ದುಪಡಿಯನ್ನು ಈಗ ಅನಿವಾರ್ಯವಾಗಿ ತಂದಿದ್ದೇವೆ. ಇದಕ್ಕೂ ಕೂಡ ರಾಷ್ಟ್ರಪತಿಯವರ ಅಂಕಿತ ಬೀಳಬೇಕಾಗುತ್ತದೆ. ಆದುದರಿಂದ ಇದನ್ನು ರಾಷ್ಟ್ರಪತಿಯವರಿಗೆ ಕಳುಹಿಸಿ ಕೊಡುತ್ತೇವೆ. ಇಲ್ಲಿ ಯಾವುದೇ ರೀತಿಯ ಕೇಂದ್ರದ ಕಾನೂನಿನಲ್ಲಿ ನಾವು ಯಾವುದೇ ಹಸ್ತಕ್ಷೇಪ ಮಾಡುತ್ತಿಲ್ಲ. ಆದರೆ ಬೇಗನೆ ಮುಕ್ತಾಯಗೊಳ್ಳಬೇಕೆಂಬ ಕಾರಣಕ್ಕಾಗಿ, ಒಂದು ಸರಳವಾದಂಥಾ ತಿದ್ದುಪಡಿಯನ್ನು ತರಲಾಗಿದೆ.

ಶ್ರೀ ಕೆ.ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೆ, ನಾನು ಹೇಳುವಂತಾದ್ದು ಏನೆಂದರೆ, ಮಾನ್ಯ ಸಹಕಾರ ಮಂತ್ರಿಯವರು ರೆವಿನ್ಯೂನಲ್ಲಿ ತಹಶೀಲ್ದಾರರು, ಅಲ್ಲಿಂದ ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳೆಂದು ಹೇಳುತ್ತಾರೆ. ಈಗ ನಿಮಗೆ ಇಲ್ಲಿ ಹೇಳುವುದಾದರೆ, ವಿನಿವಿಂಕ್ ಶಾಸ್ತ್ರಿ ಇಲ್ಲಿ ಅವರ ಹೆಸರನ್ನು ಹೇಳಬೇಕೊ, ಬೇಡವೊ, ಗೊತ್ತಿಲ್ಲ. ಈ ಪ್ರಕರಣದಲ್ಲಿ ನೂರಾರು ಕೋಟಿ ರೂಪಾಯಿಗಳ ಬಗ್ಗೆ ಇದೆ. ಇದನ್ನು ನೀವು Deputy Registrar ಗೆ, Assistant Registrarಗೆ ಕೊಟ್ಟು ಮಾಡುವುದಕ್ಕೆ ಆಗುತ್ತದೆಯೇ? ಇಲ್ಲಿ ವಾಸ್ತವಾಂಶವನ್ನು ಮಾನ್ಯ ಕಾನೂನು ಸಚಿವರು ಹೇಳಬೇಕು. ಇವತ್ತು ವಿನಿವಿಂಕ್ ಕೇಸ್ ನಮ್ಮ ರಾಜ್ಯದಲ್ಲೇ ಇದೆ. ಅದು ಹತ್ತಾರು ಕೋಟಿ

ರೂಪಾಯಿಗಳಲ್ಲ, ನೂರಾರು ಕೋಟಿ ರೂಪಾಯಿಗಳ ಅಪೀಲು ನಿಮ್ಮ ಡೆಪ್ಯೂಟಿ ರಿಜಿಸ್ಟ್ರಾರ್ ಹತ್ತಿರ ಹೋದಾಗ, ಅದರ ಬೆಲೆ ಎಷ್ಟು ಇರಬಹುದೆಂದು ನೀವೇ ಅರ್ಥ ಮಾಡಿಕೊಳ್ಳಿ. ಇಲ್ಲಿ ನೀವು revenue matters ಅನ್ನು co-operative matters ಗೆ ಅದರಲ್ಲೂ ಚಿಟ್‌ಫಂಡ್‌ಗೆ ನೀವು ವರ್ಗಾಯಿಸುವಾಗ ಇದನ್ನು ಬಹಳ ಯೋಚನೆ ಮಾಡಿ ಮಾಡಬೇಕಾಗುತ್ತದೆ. ಇವತ್ತು ಚಿಟ್‌ಫಂಡ್‌ಗಳನ್ನು ಮಾಡುವಂಥಾದ್ದಲ್ಲಿ ಶೇ.70 ರಿಂದ ಶೇ.80 ಮೋಸವಾಗಿರುವಂಥಾದ್ದು. ನೀವು ವಾಸ್ತವಾಂಶವನ್ನು ಇಡೀ ದೇಶದಲ್ಲೇ ತೆಗೆದುಕೊಳ್ಳಿ. ನಾನು ಎಲ್ಲರೂ ಎಂದು ಹೇಳಿಲ್ಲ. ಆದುದರಿಂದ ಇಲ್ಲಿ ಸಾರ್ವಜನಿಕರ ಹಣ involve ಆಗುವುದರಿಂದ, ಇದಕ್ಕೆ ನಾವು ಹೆಚ್ಚಿನ ಆದ್ಯತೆಗಳನ್ನು ಕೊಡಬೇಕಾಗುತ್ತದೆ. ಇಂಥಾ ವಿನಿವಿಂಕ್ ಶಾಸ್ತ್ರಿಗಳಂಥವರು ನೂರಾರು ಜನ ಹುಟ್ಟಿಕೊಳ್ಳುತ್ತಾರೆ. ನೀವು ಈ ರೀತಿಯಲ್ಲಿ ಮುಂದಕ್ಕೆ ಹೋದರೆ, ನೂರಾರು ಜನರು ಹುಟ್ಟುತ್ತಾರೆ. ಸಾರ್ವಜನಿಕರನ್ನು ಸಮಾಪ್ತಿ ಮಾಡುತ್ತಾರೆ. ಆದುದರಿಂದ ಇದು ಹಿಂದೆ ಏನು ಇತ್ತೊ, ಅದನ್ನೆ ಮುಂದುವರೆಸಿದರೆ, ಕನಿಷ್ಟ ಬಿಗಿ ಇರುತ್ತದೆಂದು ನನ್ನ ಅಭಿಪ್ರಾಯವಾಗಿದೆ. ಈ ಬಗ್ಗೆ ಮಾನ್ಯ ಸಹಕಾರ ಮಂತ್ರಿಯವರು ಚಿಂತನೆ ಮಾಡಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಹಣಕಾಸು ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿಯನ್ನು ಹೆಚ್ಚು ಮಾಡಲಿಕ್ಕೆ ಮಾನ್ಯ ಪ್ರಕಾಶ್‌ರವರು ಒಂದು ಬಿಲ್ ಅನ್ನು ತಂದರು. ಅದನ್ನು ನಾವು ಒಪ್ಪಿಕೊಂಡೆವು. ಈಗ ನೀವು ಅಧಿಕಾರ ವ್ಯಾಪ್ತಿಯನ್ನು ವಿಕೇಂದ್ರೀಕರಣ ಮಾಡುತ್ತೇವೆ ಎಂದರೆ, ಯಾವ ಅಧಿಕಾರಿಗೆ ಎಷ್ಟು ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿ ಎನ್ನುವುದು ನಮಗೆ ಬೇಕು. ಎಲ್ಲವನ್ನೂ ತೆಗೆದು Assistant Registrar ರಿಂದ ಶುರು ಮಾಡುತ್ತಾರಾ ಅಥವಾ Assistant Registrar ಗೆ ಇಷ್ಟು, Deputy Registrar ಗೆ ಇಷ್ಟು, Joint Registrar ಗೆ ಇಷ್ಟು, ಎನ್ನುವ ವ್ಯವಸ್ಥೆ ಬರುತ್ತದಾ ಎಂದು ಹೇಳಬೇಕು. Delegation of powers ಮಾಡುವಾಗ ನೇರವಾಗಿ....

ಶ್ರೀ ಎಸ್.ಎಸ್.ಪಾಟೀಲ್: ಮಾಧುಸ್ವಾಮಿಯವರು ಕೇಳಿದ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. Assistant Registrar ಮೊದಲು ಮಾಡುತ್ತಾನೆ, ಅದರ ಮೇಲೆ ಅಪೀಲ್ Deputy Registrar ಗೆ ಬರುತ್ತದೆ, Deputy Registrar ರಿಂದ Joint Registrar ಗೆ, Joint Registrar ಇಂದ Registrar ಗೆ

ಬರುತ್ತದೆ. Registrar ಮೇಲೆ ಸರ್ಕಾರಕ್ಕೆ ಅಧಿಕಾರವಿದೆ. ಯಾರು ಮಾಡಿರುತ್ತಾರೋ ಅವರಿಗೇ ಪುನಃ ಅಪೀಲ್ ಕೇಸನ್ನು ಕೊಡುವಿರಾ? ಇದು ಸರಿಯೇ? ಇದು ಬಹಳ ತಪ್ಪಾಗುತ್ತದೆ. ಇದನ್ನು ನೀವು ವಿಚಾರ ಮಾಡಿ. ಅಪೀಲ್ ನಿಮ್ಮ ಕಡೆ ಬಂದರೆ, ಯಾರು ಜಡ್ಜ್‌ಮೆಂಟ್ ಬರೆದಿರುತ್ತಾನೆ, ಪುನಃ ಅವನಿಗೇ ಕೊಡುತ್ತೀರಿ. ಇದು ಸರಿಯಾಗುವುದಿಲ್ಲ. ಇದನ್ನು ಇನ್ನಷ್ಟು ವಿಚಾರ ಮಾಡಿ.

ಶ್ರೀ ಜಿ.ಟಿ.ದೇವೇಗೌಡ: ಸಹಾಯಕ ನಿಬಂಧಕರಿಗೆ 15 ಲಕ್ಷ, ಉಪನಿಬಂಧಕರಿಗೆ 25 ಲಕ್ಷ, ಜಂಟಿ ನಿಬಂಧಕರಿಗೆ 50 ಲಕ್ಷ ಈ ರೀತಿ slab ಮಾಡುತ್ತೇವೆ. ಇದಕ್ಕೂ ಮೇಲಿದ್ದರೆ ಸರ್ಕಾರಕ್ಕೇ ಬರುವಂತೆ slab ಮಾಡಬೇಕು ಎನ್ನುವುದನ್ನೂ ನಾವು ಮಾಡುತ್ತಿದ್ದೇವೆ.

ಶ್ರೀ ಕೆ.ಶ್ರೀನಿವಾಸಗೌಡ: Act ಗೆ amendment ತಂದು, powers ಏನು ಎಂದು ಹೇಳದೇ ಇದನ್ನು ಪಾಸ್ ಮಾಡಿಕೊಡಿ ಎಂದರೆ ಯಾವ ನ್ಯಾಯ? ಒಂದು ಕೆಲಸ ಮಾಡಿ. ನೀವು ಈಗ ಏನು ಹೇಳುತ್ತಿದ್ದೀರೋ ಅದನ್ನು ಸೇರಿಸಿ ನಾಳೆ ತೆಗೆದುಕೊಂಡು ಬನ್ನಿ. ನಾಳೆ ಪಾಸ್ ಮಾಡಿಕೊಡೋಣ.

ಅಧ್ಯಕ್ಷರು: ಚಿಟ್ ಫಂಡ್‌ಗಳಿಗೆ ಸಂಬಂಧಪಟ್ಟ ಹಾಗೆ ನೂರಾರು ಕೇಸುಗಳಿದ್ದರೆ, ಮೇಲ್ಮಟ್ಟದಲ್ಲಿ ರಿಜಿಸ್ಟ್ರಾರ್‌ರವರು ಮಾಡುವುದಕ್ಕಾಗುವುದಿಲ್ಲ, ಅವರಿಗೆ ಹೊರೆಯಾಗುತ್ತದೆ ಎನ್ನುವುದು ಒಂದು ವಿಚಾರ. ಅಥವಾ ಕೆಲವೇ ಕೆಲವು ಕೇಸುಗಳಿದ್ದರೆ ಅವರು ಅವುಗಳನ್ನು dispose ಮಾಡುವುದಕ್ಕೆ ಸಾಧ್ಯವಿದೆ. ಆಗ ನೀವು decentralization ಮಾಡತಕ್ಕಂಥ ಅಗತ್ಯವಿಲ್ಲ. ಒಟ್ಟು ಎಷ್ಟು ಕೇಸುಗಳಿವೆ?

ಶ್ರೀ ಜೆ.ಸಿ.ಮಾಧುಸ್ವಾಮಿ: ನೀವು ಬೇರೆಯೇ ಶಿಫಾರಸ್ಸು ಮಾಡಬೇಕು. ಇವುಗಳಿಗೆಲ್ಲ ನೀವು ಒಂದು Special Court ಅನ್ನೇ ಮಾಡಬೇಕಾಗುತ್ತದೆ. Non banking financial institutions, chit funds ಹೀಗೆ Co-operative Act ನಿಂದ ಆಚೆ ರಿಜಿಸ್ಟರ್ ಆಗಿರುವಂಥ ಅಥವಾ ಎನ್‌ರೋಲ್ ಆಗಿರುವಂಥ ಸಂಸ್ಥೆಗಳು ಮಾಡುತ್ತಿರುವ ಚೀಟಿಂಗ್‌ಗೆ ನೀವು ಒಂದು ಕೋರ್ಟ್ ಮಾಡಬೇಕಾಗುತ್ತದೆ. ಅದಕ್ಕೆ Finance Department ನವರು ಬೇರೆ ಬಿಲ್ ಅನ್ನೇ ಇಟ್ಟಿದ್ದಾರೆ. ಅವರು D.C. ಕೆಳಗಡೆ Authority ಯನ್ನು

ನೇಮಕ ಮಾಡಿದ್ದಾರೆ. ಅದನ್ನೆಲ್ಲ ತಾವು ಓದಬೇಕಾಗುತ್ತದೆ. ಪ್ರಕಾಶ್‌ರವರೇ ನೀವು existing provision ಅನ್ನು ಓದಬೇಕು. Even the appeal after Registrar's decision lies with Government. ಅದನ್ನೂ delegate ಮಾಡುತ್ತೇವೆ ಎಂದರೆ, Registrar is an autonomous body. You may control Registrar here. Under law, under Central Act, he has to be autonomous. ಅವನ ಮೇಲೆ ಏನಾದರೂ ತೀರ್ಮಾನ ತೆಗೆದುಕೊಳ್ಳಬೇಕಾಗಿದ್ದರೆ ಅದನ್ನು Government ತೆಗೆದುಕೊಳ್ಳಬಹುದೇ ಹೊರತು ಬೇರೆಯವರು ಮಾಡಬಾರದು. He is already equal to your High Court. ಅವರ ಕೆಳಗಡೆ Additional Registrar ಇದ್ದಾರೆ, ಅವರ ಕೆಳಗಡೆ Joint Registrar ಇದ್ದಾರೆ, ಅವರ ಕೆಳಗಡೆ Deputy Registrar ಇದ್ದಾರೆ. Registrar ರವರು direct ಆಗಿ ಮನವಿ ತೆಗೆದುಕೊಂಡು ಕೇಸ್ ಡೀಲ್ ಮಾಡಿರುವುದಿಲ್ಲ. He is already at the Apex level. ಅವನ ಮೇಲೆ Government ಗೆ ಅಪೀಲ್ ಇರುವುದನ್ನೂ ಕೂಡ ನೀವು delegate ಮಾಡಲು ಹೊರಟಿರುವುದು ತಪ್ಪು.

ಶ್ರೀ ಜಿ.ಟಿ.ದೇವೇಗೌಡ: ಈ ಸಂಸ್ಥೆಗಳ ಸಂಖ್ಯೆ ಸುಮಾರು 385. ಚೀಟಿ ಗುಂಪುಗಳು 3,956. ಚೀಟಿ ಮೊತ್ತ 44 ಕೋಟಿ 56 ಲಕ್ಷ, ಸರ್ಕಾರಕ್ಕೆ ಅವರು ಪಾವತಿ ಮಾಡಿರುವ ಶುಲ್ಕ 17 ಲಕ್ಷ 10 ಸಾವಿರ ರೂಪಾಯಿಗಳು. ಭದ್ರತಾ ಠೇವಣಿ 44 ಕೋಟಿ 56 ಲಕ್ಷ ರೂಪಾಯಿಗಳಿದೆ. ಚೀಟಿ ಗುಂಪುಗಳಲ್ಲಿ ಸದಸ್ಯರು 1 ಲಕ್ಷ ಇದ್ದಾರೆ. ಚೀಟಿ ವ್ಯಾಜ್ಯಗಳು 984 ಇವೆ. ಅಪೀಲುಗಳು 100 ಇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: 100 ಅಪೀಲುಗಳನ್ನು dispose ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಸರ್ಕಾರ ಹೇಗೆ ನಡೆಯುತ್ತದೆ?

ಅಧ್ಯಕ್ಷರು: Registrar ರವರಿಗೆ ಕೊಡುತ್ತೀರಿ, ಅವರು ಅವುಗಳನ್ನು dispose ಮಾಡುವುದಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: Government means Secretary. Secretary, Co-operation ರವರು Registrar ಮೇಲೆ ಅಪೀಲ್ ತೆಗೆದುಕೊಂಡು, ಆ ಕೆಲಸವನ್ನು ಮಾಡಬೇಕು. ಅವರು ಬೇರೆ ಏನು ಕೆಲಸ ಮಾಡುತ್ತಾರೆ?

ಅಧ್ಯಕ್ಷರು: ಇದಕ್ಕೆ Law Minister ರವರು ಉತ್ತರ ಹೇಳಬೇಕು. ಮಾಧುಸ್ವಾಮಿಯವರು ಹೇಳಿದುದರ ಬಗ್ಗೆ ಗಂಭೀರವಾಗಿ ಯೋಚನೆ ಮಾಡಬೇಕು. ಚಿಟ್‌ಫಂಡ್ಸ್‌ನಲ್ಲಿ 90% ತಿರುಪತಿ ನಾಮವೇ ಆಗುವುದು. ಅದಕ್ಕೆ ವಿಶೇಷವಾಗಿ ಒಂದು ಭದ್ರತೆ ಮಾಡದಿದ್ದರೆ ಎಲ್ಲರ ತಲೆಯನ್ನು ಬೋಳಿಸಿ ಬಿಡುತ್ತಾರೆ. ಆದ್ದರಿಂದ, ಇದನ್ನು ಸ್ವಲ್ಪ ಸೀರಿಯಸ್ ಆಗಿ ತೆಗೆದುಕೊಳ್ಳಬೇಕು.

ಶ್ರೀ ಎಂ.ಪಿ.ಪ್ರಕಾಶ್: ಚಿಟ್ ಫಂಡ್ಸ್ ಎನ್ನುವುದು chit funds ಅಲ್ಲ, ಅದು cheat funds. ಇಲ್ಲಿ ಸರ್ಕಾರದ ಉದ್ದೇಶ ಬಹಳ ಸರಳವಾಗಿದೆ. ನೂರು ಕೇಸುಗಳು ಎನ್ನತಕ್ಕಂಥಾದ್ದು ಇರಬಹುದು ಅಥವಾ ಅದಕ್ಕಿಂತ ಹೆಚ್ಚಿನದೂ ಇರಬಹುದು. ಈ ವಿಚಾರದಲ್ಲಿ ತಾವು ಏನು ಆಕ್ಷೇಪಣೆ ಮಾಡಿದ್ದೀರಿ ಎಂದರೆ, ಬಹಳ ದೊಡ್ಡ ಮೊತ್ತವನ್ನು ಹೊಂದಿರತಕ್ಕಂಥ ವಿವಾದಗಳನ್ನು ಕೆಳಹಂತದಲ್ಲಿ ಕೊಟ್ಟರೆ ತೊಂದರೆಯಾಗುತ್ತದೆ, ಅವರು ಪ್ರಭಾವಕ್ಕೆ ಒಳಗಾಗಬಹುದು, ನ್ಯಾಯ ಸಿಗದೇ ಹೋಗಬಹುದು ಎನ್ನುವ ಆತಂಕ ಎಲ್ಲ ಸನ್ಮಾನ್ಯ ಸದಸ್ಯರಿಗಿದೆ. ಯಾರ್ಯಾರಿಗೆ ಎಷ್ಟೆಷ್ಟು ಮೊತ್ತದವರೆಗೆ ಅಧಿಕಾರವನ್ನು ಕೊಡಬೇಕು ಎನ್ನುವುದರ ಬಗ್ಗೆ ಮುಂದೆ ನಿರ್ಣಯಗಳನ್ನು ಮಾಡಲಿಕ್ಕೂ provision ಮಾಡಿಕೊಂಡಿದ್ದೇವೆ.

"The State Government or such officer or authority aforesaid may, after giving the appellant an opportunity of making his representation, pass such orders on the appeal as it or he thinks fit and such order shall be final."

"All appeals pending before the State Government, on such date of notification empowering such officer or authority, shall be transferred to such officer or authority and shall be disposed off as if it has been filed before such authority."

"Section 70 shall be renumbered as sub-section (1) there of and in sub-section (1) as so renumbered, after the

words "State Government", the words "or to such officer or authority, as may be empowered by notification by the State Government, in that behalf" shall be inserted;"

ನಾವು ನಿಯಮಾವಳಿಗಳನ್ನು ರಚನೆ ಮಾಡುವಾಗ, ಸಹಕಾರ ಸಚಿವರು ಹೇಳಿದಂತೆ 15 ಲಕ್ಷ, 25 ಲಕ್ಷ ಈ ರೀತಿಯ ಮೊತ್ತವನ್ನು ನಗದಿ ಮಾಡುತ್ತೇವೆ. ಈಗ ನಮ್ಮ ಮುಂದೆ ವಿಪರೀತವಾದಂಥ ಒತ್ತಡ ಮತ್ತು ಮೇಲ್ಮನವಿ ಇರತಕ್ಕಂಥಾದ್ದಕ್ಕೆ ಅವರಿಗೆ ನಾವು ಕೊಡುತ್ತೇವೆ. ಕೇಂದ್ರ ಸರ್ಕಾರದ ಈ ಕಾನೂನನ್ನು ನಮ್ಮ ಉದ್ದೇಶದ ಪ್ರಕಾರ ತಿದ್ದುಪಡಿ ಮಾಡಿದ ಮೇಲೆ ಅದನ್ನು ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸುತ್ತೇವೆ. ಈ ಅಧಿಕಾರವನ್ನು ಕೆಳಹಂತದಲ್ಲಿ ಕೊಡಬಾರದು ಎಂದು ಸದನದ ಕೆಲವು ಮಾನ್ಯ ಶಾಸಕರು ತಮ್ಮ ಅಭಿಪ್ರಾಯವನ್ನು ಹೇಳಿದಂತೆ, ಅದೇ ಅಭಿಪ್ರಾಯವನ್ನು ರಾಷ್ಟ್ರಪತಿಗಳು ಇಟ್ಟುಕೊಂಡಿದ್ದರೆ, ಅವರು ಇದಕ್ಕೆ ಅಂಕಿತ ಹಾಕದೇ ನಿರಾಕರಿಸಬಹುದು. ಆದ್ದರಿಂದ, ದಯವಿಟ್ಟು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: Law Minister ರವರೇ ದಯವಿಟ್ಟು ಕೇಳಿ. ಇದು ತಮಗೆ ಸರಿ ಅನ್ನಿಸಿದರೆ ಕಳುಹಿಸಿ ಬಿಡಿ. ಸುಮ್ಮನೆ ವಾದ ಬೇಡ.

ಅಧ್ಯಕ್ಷರು: ಅವರು ಅದನ್ನು ಸರಿ ಎಂದು ಹೇಳಿಬಿಟ್ಟಿದ್ದಾರೆ. ಅವರು ಹೇಳಿದ ಧಾಟಿ ಗೊತ್ತಾಗಲಿಲ್ಲವೇ? ಈಗ ಪರ್ಯಾಲೋಚನಾ ಪ್ರಸ್ತಾವ.

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"2007ರ ಚಿಟ್‌ಫಂಡುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು: "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಜಿ.ಟಿ.ದೇವೇಗೌಡ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, 2007ರ ಚಿಟ್‌ಫಂಡುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ,

"2007ರ ಚಿಟ್‌ಫಂಡುಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ–8)

ಅಧ್ಯಕ್ಷರು: ಕರ್ನಾಟಕ ಶಿಕ್ಷಣ ವಿಧೇಯಕದ, 2007, ಇದನ್ನು ನಾಳೆ ತೆಗೆದುಕೊಳ್ಳೋಣ. ಈಗ ಆರು ಗಂಟೆಯಾಯಿತು. ಎಣ್ಣೆ ಕಾಳುಗಳ ಬಗ್ಗೆ ಪ್ರಸ್ತಾಪ ಮಾಡಲು ಹಂಪನಗೌಡ ಬಾದರ್ಲಿಯವರು ಕಾದಿದ್ದಾರೆ.

ಅಧ್ಯಕ್ಷರು: ಹಂಪನಗೌಡರು ಎಣ್ಣೆಕಾಳು ವಿಚಾರದಲ್ಲಿ ಬಹಳ ಅನ್ಯಾಯವಾಗಿದೆ ಎಂದು ಗಮನ ಸೆಳೆಯಲು ಕಾಯುತ್ತಿದ್ದಾರೆ. ನಾಳೆ ಸಹ ಸಾಕಷ್ಟು ವಿಷಯಗಳು ಇವೆ.

(ಗೊಂದಲ)

ಶ್ರೀ ಬಿ.ಎಸ್.ಹೊರಟ್ಟಿ: ನನ್ನ ಇಲಾಖೆಗೆ ಸಂಬಂಧಪಟ್ಟ ಒಂದು simple bill ಇದೆ. ಅದು ಈಗಾಗಲೇ ಮಂಡನೆಯಾಗಿದೆ. ಪರ್ಯಾಲೋಚನೆ ಮಾಡಬೇಕಷ್ಟೆ. ಇದು ಹಳೆಯ ಬಿಲ್.

(ಗೊಂದಲ)

ಅಧ್ಯಕ್ಷರು: ಹೊರಟ್ಟಿಯವರು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಒಂದು ಬಿಲ್ ಇದ್ದು ಅದು simple 5 ನಿಮಿಷದಲ್ಲಿ ಆಗುತ್ತದೆಂದು ಹೇಳುತ್ತಿದ್ದಾರೆ. ಅದೊಂದು ಪೂರ್ಣಗೊಳ್ಳಲಿ.

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ನಾಳೆ ತೆಗೆದುಕೊಳ್ಳಿ. ಗಮನ ಸೆಳೆಯುವ ಸೂಚನೆಗಳಿವೆ, ಸಾರ್ವಜನಿಕ ಮಹತ್ವದ ವಿಷಯಗಳಿವೆ, ಇಷ್ಟು ಹೊತ್ತು ನಾವು ನಿಮಗೆ co-operate ಮಾಡುತ್ತಿಲ್ಲವೆ?

ಅಧ್ಯಕ್ಷರು: ಆಯಿತು. ಅವರದು 5 ನಿಮಿಷದ bill ಇದೆಯಂತೆ. ಸುಮ್ಮನೆ ಏಕೆ ಗಲಾಟೆ ಮಾಡುತ್ತಿದ್ದೀರಿ?

(ಗೊಂದಲ)

ಶ್ರೀ ಜೆ.ಸಿ.ಮಾಧುಸ್ವಾಮಿ: ಅದನ್ನು ನಾಳೆ ತೆಗೆದುಕೊಳ್ಳಿ. ಈಗ ಗಮನ ಸೆಳೆಯುವ ಸೂಚನೆಗಳು ಇತ್ಯಾದಿಗಳನ್ನು ಚರ್ಚೆಗೆ ತೆಗೆದುಕೊಳ್ಳಿ.